

## ಕಪ್ಪೆ ಚಿಪ್ಪಿನೊಳಗೆ ಕುಳಿತು...

ಬಸ್‌ಗಾಗಿ ಕಾಯುವ ತಾಣವೆಂಬ ಕಲ್ಪನೆಯ ಹೊರತಾಗಿ, ಆ ಜಾಗವನ್ನು ಒಂದು ಕಲಾ ತುಣುಕಾಗಿ ನೋಡಿರುವುದು ಅಬ್ಖಾಜಿಯಾ ದೇಶ. ಸಾಮಾನ್ಯವಾದುದನ್ನು ಅಸಾಮಾನ್ಯವಾಗಿ ತೋರಬೇಕು ಎಂಬ ಉದ್ದೇಶದೊಂದಿಗೆ ಬಸ್ ನಿಲ್ದಾಣಗಳನ್ನೂ ಇಲ್ಲಿ ಕಲಾತ್ಮಕವಾಗಿ ರೂಪಿಸಲಾಗಿದೆ. ಅದರಲ್ಲಿ, ಚಿಪ್ಪಿನ ಆಕಾರದ ಈ ಬಸ್ ನಿಲ್ದಾಣ ಗಮನ ಸೆಳೆಯುವಂಥದ್ದು. ಕಾಂಕ್ರೀಟ್‌ನಿಂದ ನಿರ್ಮಿಸಲಾದ ಈ ನಿಲ್ದಾಣಕ್ಕೆ ಮೊಸಾಯಿಕ್, ಕೋಬಾಲ್ಟ್ ಗ್ಲಾಸನ್ನು ಹೆಚ್ಚಾಗಿ ಬಳಸಲಾಗಿದೆ. ಬ್ಲಾಕ್ ಸೀ ಕಾರಣವಾಗಿಯೇ ಪ್ರಸಿದ್ಧಿ ಪಡೆದ ಅಬ್ಖಾಜಿಯಾ ದೇಶದ ಹೆಗ್ಗುರುತಿನಂತೆ ನಿಲ್ದಾಣಗಳನ್ನು ಪ್ರತಿನಿಧಿಸಲು ಸಾಗರಜೀವಿ, ವಸ್ತುಗಳ ಆಕಾರಗಳನ್ನೇ ಬಸ್ ನಿಲ್ದಾಣಗಳಿಗೆ ನೀಡಲಾಗಿದೆ. ಮೀನು, ಡಾಲ್ಫಿನ್, ಆಕ್ಟೋಪಸ್, ಅಲೆಗಳ ಆಕಾರಗಳಲ್ಲಿ ನಿಲ್ದಾಣಗಳಿವೆ.

## ಸುರುಳಿಯಲ್ಲಿ ಕಾಲ ನೂಕುತ್ತಾ...

ಬಸ್ ಕಾಯುವುದು ಕೆಲವರಿಗೆ ತ್ರಾಸದಾಯಕ ಕೆಲಸ. ಆ ತ್ರಾಸನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸ್ಪೇನ್‌ನಲ್ಲಿ ಇಂಥದ್ದೊಂದು ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದೆ. ಸ್ಪೇನ್‌ನ ಕ್ಯಾಸರ್ ಡಿ ಕ್ಯಾಸಿರೆಸ್‌ನಲ್ಲಿ ಈ 'ಕಾಂಕ್ರೀಟ್ ಕರ್ವ್' ಎಂದೇ ಈ ಬಸ್ ನಿಲ್ದಾಣ ಜನಪ್ರಿಯವಾಗಿದೆ. ಜಸ್ಟೊ ಗಾರ್ಸಿಯಾ ರುಬಿಯೊ ಎಂಬ ಕಲಾವಿದ ಈ ಬಸ್ ನಿಲ್ದಾಣ ವಿನ್ಯಾಸಗೊಳಿಸಿದ್ದು. ಸಿಮೆಂಟ್‌ನ ರಿಬ್ಬನ್‌ಗಳಂತೆ ಸುರುಳಿ ಸುರುಳಿಯಾಗಿ ನಿಲ್ದಾಣದ ವಿನ್ಯಾಸ ಮಾಡಲಾಗಿದ್ದು, ಈ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸಕಲ ಸೌಲಭ್ಯಗಳನ್ನೂ ನೀಡಲಾಗಿದೆ. ಸ್ಪೇನ್‌ನ ವಿಶೇಷತೆ ಹಾಗೂ ಆಧುನಿಕ ವಿನ್ಯಾಸದ ಪ್ರತೀಕವಾಗಿಯೂ ಇದು ಗಮನ ಸೆಳೆಯುತ್ತದೆ.



ಸಾಂಕೇತಿಕ ಚಿತ್ರ



## 'ಬೀ' ಸ್ಟಾಪ್

ನಗರೀಕರಣದ ಭರದಲ್ಲಿ ಪ್ರಕೃತಿಯನ್ನು ನಾವು ನಿರ್ಲಕ್ಷಿಸುತ್ತಲೇ ಬಂದಿದ್ದೇವೆ. ಕಾಡು ನಾಶ ಮಾಡಿ, ಪ್ರಾಣಿಗಳ ಆವಾಸಸ್ಥಾನವನ್ನೂ ಕಬಳಿಸಿದ್ದೇವೆ. ಹಸುರು ಕಡಿಮೆಯಾಗುತ್ತಿದ್ದಂತೆ, ಜೀವಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುವ ಜೇನುಹುಳಗಳ ಸಂಖ್ಯೆಯೂ ಕ್ಷೀಣಿಸುತ್ತಿದೆ. ಹೀಗೇ ಆದರೆ ಮುಂದಿನ ಕಥೆಯೇನು? ಹೀಗೆ ಯೋಚಿಸಿರುವ ಇಂಗ್ಲೆಂಡ್ ಮಂದಿ ಹೀಗೊಂದು ಪ್ರಯತ್ನಕ್ಕೆ ಮುಂದಾಗಿದ್ದಾರೆ. ಬಸ್ ನಿಲ್ದಾಣಗಳ ಮೇಲಿನ ಖಾಲಿ ಜಾಗವನ್ನು ಜೇನುಹುಳಗಳ ಸಂಖ್ಯೆ ವೃದ್ಧಿಸಲು ಸದುಪಯೋಗಪಡಿಸಿಕೊಂಡಿದ್ದಾರೆ. ಬಸ್ ಸ್ಟಾಪ್‌ನ ಬದಲು ಇದನ್ನೇ 'ಬೀ' ಸ್ಟಾಪ್, 'ಬಝ್' ಸ್ಟಾಪ್ ಎಂದು ಕರೆದಿದ್ದಾರೆ. 'ಲಿವಿಂಗ್ ರೂಫ್' ಎಂದೇ ಈ ಪರಿಕಲ್ಪನೆ ಪ್ರಸಿದ್ಧಿ ಪಡೆದಿದೆ.

ಇಂಗ್ಲೆಂಡ್‌ನ ಲೀಸೆಸ್ಟರ್ ನಗರದಲ್ಲಿ ಹೀಗೆ ಜೇನುಹುಳಗಳಿಗೆಂದು ಬಸ್ ನಿಲ್ದಾಣದ ಚಾವಣಿಗಳನ್ನು ಬಳಸಿಕೊಳ್ಳಲಾಗಿದ್ದು, ಅಲ್ಲಿ ಹಸುರು ಹುಲ್ಲು ಹಾಗೂ ಗಿಡಗಳನ್ನು ಬೆಳೆಸಲಾಗುತ್ತಿದೆ. ಜೇನುಹುಳಗಳ ಸಂಖ್ಯೆ ವೃದ್ಧಿಗೆ ಇದರಿಂದ ಒಂದಿಷ್ಟಾದರೂ ಅನುಕೂಲವಾಗಲಿ ಎಂಬ ಆಶಯದೊಂದಿಗೆ. ಇದೇ ಮಾದರಿಯನ್ನು ಕೆನಡಾ, ಆಸ್ಟ್ರೇಲಿಯಾ ಕೂಡ ಅನುಸರಿಸುತ್ತಿದೆ.

## ಟ್ಯೂಬ್ ಸ್ಟೇಷನ್

1974ರಲ್ಲಿ ರೂಪುಗೊಂಡ ಈ ಬಸ್ ನಿಲ್ದಾಣ, 'ಟ್ಯೂಬ್ ಸ್ಟೇಷನ್' ಎಂದೇ ಪ್ರಸಿದ್ಧಿ. ಆಧುನಿಕ ವಿನ್ಯಾಸಕ್ಕೆ ಒತ್ತುಕೊಟ್ಟು ಕ್ಯುರಿಟಿಬಾದಲ್ಲಿ ಕೊಳವೆಯಂತಿರುವ ಈ ನಿಲ್ದಾಣ ರೂಪಿತಗೊಂಡಿದೆ.

ಸದರನ್ ಬ್ರೆಜಿಲ್‌ನ ಕ್ಯುರಿಟಿಬಾದಲ್ಲಿ ನಿರ್ಮಿಸಲಾದ ಈ ಬಸ್ ನಿಲ್ದಾಣ, ವಿಶ್ವದಲ್ಲೇ ತನ್ನ ವಿಭಿನ್ನ ವಿನ್ಯಾಸಕ್ಕೆ ಹೆಸರಾಗಿದೆ. 'ಡಿಸೈನ್ ಫಾರ್ ಲಿವಿಂಗ್' ಹಾಗೂ 'ಅರ್ಬನ್ ಲಿವಿಂಗ್' ಎಂಬ ಹಸುರು ಪರಿಕಲ್ಪನೆಯಲ್ಲಿ ಈ ನಿಲ್ದಾಣವನ್ನು ವಿನ್ಯಾಸಗೊಳಿಸಿದ್ದು, ಕ್ಯುರಿಟಿಬಾದ ಕಲಾಕೌಶಲ ಹಾಗೂ ಯೋಜನಾಬದ್ಧ ಜೀವನಕ್ಕೆ ಈ ನಿಲ್ದಾಣ ಒಂದು ನಿದರ್ಶನದಂತೆ ಕಾಣುತ್ತಿದೆ.

